ದಿನಾಂಕಃ **27.07.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **1**ನೇ ಪ್ರತಿವಾದಿ ಪರ ವಕೀಲರಾದ ಶ್ರೀ **ಜಿ.ಎಸ್.ಪಿ** ರವರಿಂದಃ

ನಾಯಂಡಹಳ್ಳಿಯಲ್ಲಿ ನನ್ನ ತಾತ ಗೋವಿಂದಪ್ಪ ರವರು **1965**ನೇ ಇಸವಿಯ ಪೂರ್ವದಲ್ಲಿ ಕೆಲವೊಂದು ಸ್ವತ್ತುಗಳನ್ನು ಖರೀದಿಸಿದ್ದರು. ನನ್ನ ತಂದೆ ಸಹ ಸ್ವತ್ತುಗಳನ್ನು ಖರೀದಿಸಿದ್ದರು. ನಿಪಿ-**24** ಮತ್ತು **25** ಖಾತಾ ಸರ್ಟಿಫಿಕೇಟ್ ಮತ್ತು ಎಕ್ಸ್ ಟ್ರಾಕ್ಟ್ ನಲ್ಲಿ ಅಳತೆ, ವಿಸ್ತೀರ್ಣ ಮತ್ತು ಚೆಕ್ಕುಬಂದಿ ನಮೂದಾಗಿಲ್ಲ ಎಂದರೆ ಸಾಕ್ಷಿಯು ಖಾತಾ ಸರ್ಟಿಫಿಕೇಟ್ ನಲ್ಲಿ ನಮೂದಾಗಿಲ್ಲ ಎಂದು ನುಡಿಯುತ್ತಾರೆ. ನಿಪಿ-**27** ಕಂದಾಯ ತೆರಿಗೆ ರಶೀದಿಗಳನ್ನು ಈ ದಾವೆಯನ್ನು ಹೂಡಿದ ನಂತರ ಪಡೆದುಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಆ ಪೂರ್ವದಲ್ಲಿ ಸಹ ಪಡೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನಿಪಿ-**27** ಆಸ್ತಿ ತೆರಿಗೆ ರಶೀದಿಗಳು ದಾವೆಯನ್ನು ದಾಖಲಿಸಿದ ನಂತರ ಉಂಟಾದ ದಾಖಲೆಗಳು ಆಗಿರುತ್ತದೆ ಎಂದರೆ ಸರಿಯಲ್ಲ. ದಾವೆಗಾಗಿ ನಿಪಿ-**24** ರಿಂದ **27** ದಾಖಲೆಯನ್ನು ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ನಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವ ವಿಷಯಗಳು ಯಾವುದೇ ಸತ್ಯ ಸತ್ಯತೆಯಿಂದ ಕೂಡಿಲ್ಲ ಎಂದರೆ ಸರಿಯಲ್ಲ. ನಾಗರತ್ನಮ್ಮ ನಿಂದ ಹನುಮಂತಯ್ಯ ರವರ ಹೆಸರಿಗೆ ಆಗಿರುವ ಕ್ರಯ ಪತ್ರದಲ್ಲಿನ ಸ್ವತ್ತಿನ ಚೆಕ್ಕುಬಂದಿ ಸರಿ ಇರುತ್ತದೆ ಎಂದರೆ ಸರಿಯಲ್ಲ. ನಿಪಿ-**24** ಮತ್ತು **25** ದಾಖಲೆಹಳೆಂತೆ ಇರುವ ಸ್ವತ್ತಿಗೆ

ಸಂಬಂಧಿಸಿದ ಸ್ವತ್ತುಗಳ ಅಳತೆ, ವಿಸಿರ್ಣ ಮತ್ತು ಚೆಕ್ಕುಬಂದಿ ಇರುವ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ ಆದರೂ ಸಹ ಸುಳ್ಳು ಸಾಕ್ಷಿಯನ್ನು ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ **1** ಮತ್ತು **3** ನೇ ಪರ ಪಕ್ಷಗಾರರು ಮತ್ತು ವಕೀರು ಹಾಜರು ಇರುವುದಿಲ್ಲ ಆದ್ದರಿಂದ ಈ ಸಾಕ್ಷಿಗೆ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ.ಸ.ಇದೆ.

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.